## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾಯವರ ನ್ಯಾಯಾಲಯ, ಹುಣಸೂರು.

**ಸಿ.ಸಿ.3487/2022**

**ಫಿರ್ಯಾದುದಾರರುಃ** ರಕ್ಷಿತ್ ಆರ್.
ಬಿನ್ ರೇವಣ್ಣ,
ವಯಸ್ಸು 24 ವರ್ಷ,
ವಾಸಃ ತಟ್ಟೆಕೆರೆ ಗ್ರಾಮ,
ಹನಗೋಡು ಹೋಬಳಿ,
ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

**ವಿರುದ್ಧ**

**ಆರೋಪಿಃ** ಗೌತಮ್ ಕೆ.ಎನ್.
ಬಿನ್ ನಾಗರಾಜು,
ವಯಸ್ಸು 26 ವರ್ಷ,
ವಾಸಃ 1 ನೇ ಕ್ರಾಸ್, ಗೋಕುಲ ರಸ್ತೆ,
ಹುಣಸೂರು ಸಿಟಿ, ಹುಣಸೂರು,
ಮೈಸೂರು ಜಿಲ್ಲೆ.

**<u>ದಂಡ ಪ್ರಕ್ರಿಯೆ ಸಂಹಿತೆ ಕಲಂ 313 ರ ಅಡಿ ಆರೋಪಿಯ ಹೇಳಿಕೆ</u>**

ಪ್ರಶ್ನೆ.1. ಈ ಕೇಸಿನಲ್ಲಿ ನ್ಯಾಯಾಲಯದ ಮುಂದೆ ವಿಚಾರಣೆ ಮಾಡಿದ ಸಾಕ್ಷಿಯ ಹೇಳಿಕೆಯನ್ನು ಕೇಳಿದ್ದೀರಾ?

ಉತ್ತರಃ ಸುಳ್ಳು

ಪ್ರಶ್ನೆ.2. ಪ್ರಾಸಾ-1 ರಕ್ಷಿತ್ ಆರ್. ಇವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಪಿರ್ಯಾದುದಾರರಿಂದ ನಿಮ್ಮ ದರದು ನಿಮಿತ್ತ ಅಂದರೆ ಹಿಂದೆ ಮಾಡಿದ ಸಾಲ ತೀರಿಸಲು ಹಾಗೂ ನಿಮ್ಮ ವ್ಯವಹಾರವನ್ನು

ಅಭಿವೃದ್ಧಿಪಡಿಸಲು ದಿಃ 01.10.2021 ರಂದು ರೂ.4,90,000/-ಗಳನ್ನು ಸಾಲವಾಗಿ ಪಡೆದಿರುತ್ತೀರಿ, ಎಂದು ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ3. ಫ್ರಾಸಾ-1ರವರು ಮುಂದುವರೆದು, ಸದರಿ ಸಾಲದ ಮರುಪಾವತಿಗಾಗಿ ದಿಃ 15.07.2022 ರ ಚೆಕ್ ಸಂಖ್ಯೆ 666365 ರೂ.4,90,000/-ಗಳ ಕೆನರಾ ಬ್ಯಾಂಕ್, ಹುಣಸೂರು ಶಾಖೆ ಇಲ್ಲಿಗೆ ಸಂಬಂಧಿಸಿದ ಚೆಕ್ ಅನ್ನು ಕೊಟ್ಟಿರುವಿರೆಂದು ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ4. ಫ್ರಾಸಾ-1ರವರು ಮುಂದುವರೆದ ಸಾಕ್ಷ್ಯದಲ್ಲಿ, ನೀವು ಕೊಟ್ಟ ಚೆಕ್ ನ್ನು ನಗದೀಕರಣಕ್ಕಾಗಿ ಹುಣಸೂರು ಶಾಖೆಯ ಬ್ಯಾಂಕ್ ಆಫ್ ಬರೋಡಾಗೆ ಹಾಜರುಪಡಿಸಿದಾಗ ನಿಮ್ಮ ಖಾತೆಯಲ್ಲಿ "ಸಾಕಷ್ಟು ಹಣವಿಲ್ಲ" ಎಂಬ ಷರಾದೊಂದಿಗೆ ಸದರಿ ಚೆಕ್ ದಿಃ 20.07.2022 ರಂದು ಮರಳಿ ಬಂದಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ5. ಫ್ರಾಸಾ-1ರವರು ಮುಂದುವರೆದ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ನೀಡಿದ ಚೆಕ್ ಅಮಾನ್ಯಗೊಂಡ ಬಳಿಕ ಚೆಕ್ಕಿನ ಮೊತ್ತಕ್ಕೆ ಬೇಡಿಕೆ ಸಲ್ಲಿಸಿ, ವಕೀಲರ ಮುಖಾಂತರ ದಿಃ 04.08.2022 ರಂದು ನಿಮಗೆ ನೋಟಿಸ್ ಕಳುಹಿಸಿದ್ದು, ಸದರಿ ನೋಟೀಸು ನಿಮಗೆ ದಿಃ 08.08.2022 ರಂದು ಜಾರಿಯಾಗಿದ್ದರೂ ಸಹ ಆರೋಪಿಯಾದ ನೀವು ಸಾಲದ ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಹಾಗೂ ಯಾವುದೇ ಉತ್ತರವನ್ನು ನೀಡಿರುವುದಿಲ್ಲ ಎಂದು ಹೇಳುತ್ತಾರೆ. ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ6-ಈ ಪ್ರಕರಣದ ಬಗ್ಗೆ ನಿಮಗೇನಾದರೂ ಹೇಳಲು ಇದೆಯೆ?

ಉತ್ತರಃ ಫಿರ್ಯಾದಿಗೆ ಕೊಡಬೇಕಾದ ಹಣವನ್ನೆಲ್ಲಾ ಕೊಟ್ಟಿದ್ದೇನೆ

ಪ್ರಶ್ನೆ7-ನಿಮ್ಮ ಪರವಾಗಿ ಸಾಕ್ಷಿ ನೀಡಲು ಬಯಸುತ್ತೀರ?

ಉತ್ತರಃ ಇದೆ

(ಈ ಮೇಲಿನಂತೆ ಆರೋಪಿಯನ್ನು ವಿಚಾರಿಸಿ ಅವರ ಹೇಳಿಕೆಗಳನ್ನು ಯಥವತ್ತಾಗಿ ದಾಖಲಿಸಿಕೊಳ್ಳಲಾಗಿದೆ).

ದಿಃ 10.09.2025

**(ಭಾಗ್ಯಮ್ಮ)**
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹುಣಸೂರು.